
# ಕಾನನ

## ನಿಸರ್ಗದೆಡೆಗೆ ಪಯಣ



April 2014

BANNERUGHATTA WILDLIFE CONSERVATION GROUP

# ವನಸಂಚಾರ

ಹೀಗೆ ಒಂದು ದಿನ ನಾನು ಮತ್ತು ನನ್ನ ಗೆಳೆಯರಾದ ಗಿರೀಶ ,ಆನಂದ, ಅರುಣ್,ಸುನಿಲ್ ಒಟ್ಟಾಗಿ ಐದು ಜನ ಕಾಟೇರಿದೊಡ್ಡಿಯ ಬೆಟ್ಟದ ಮೇಲೆ ಮಲಗಲು ನಿರ್ಧರಿಸಿ ಹೋದೆವು. ಆ ಊರಿನಲ್ಲಿ ನಮ್ಮ ಕೆಲವು ಗೆಳೆಯರಾದ ಕಾಳಪ್ಪ ,ಮಹದೇವ, ಮತ್ತಿತರರು ನಮ್ಮೊಂದಿಗೆ ಬೆಟ್ಟದ ಮೇಲೆ ಮಲಗಲು ಬಂದಿದ್ದರು. ಹಳ್ಳಿಯ ಬಳಿ ಹೋಗುತ್ತಿದ್ದಂತೆ ಹತ್ತಾರು ಮನೆಗಳಿರುವ ಈ ಹಳ್ಳಿಯಲ್ಲಿ ಜನರೆಲ್ಲ ಗುಂಪು ಕಟ್ಟಿ ಗಲಬೆ ಮಾಡುತ್ತಿದ್ದಂತೆ ಕಂಡುಬಂದಿತು. ಈ ದೃಶ್ಯ ಕಂಡ ನಮಗೆ ಏನೋ ಮುಖ್ಯ ವಿಷಯಕ್ಕಾಗಿ ಹಳ್ಳಿಯವರೆಲ್ಲಾ ಒಟ್ಟು ಗೂಡಿದ್ದಾರೆ ಎನಿಸಿತು. ಜನರ ಗುಂಪಿನ ಹತ್ತಿರ ಹೋದಂತೆ ಅಲ್ಲಿ 'ಹೊಡೀರಿ ಹೊಡೀರಿ ' ಎಂಬ ಶಬ್ಧ ಕೇಳಿಬಂತು. ಏನಿರಬಹುದೆಂದು ವಿಚಾರಿಸಿದಾಗ ಅಲ್ಲೊಂದು ಹಾವಿರುವುದು ಗೊತ್ತಾಯಿತು . ನಮಗೆ ಹಾವನ್ನು ಕೊಲ್ಲುವರೆಂದು ಆತಂಕವಾಗಿ ನಾವು ರವಿಗೆ 'ಹಾವನ್ನು ಹೊಡೆಯುತ್ತಿದ್ದೀರಾ ?' ಎಂದು ಕೇಳಿದೆವು ಅದಕ್ಕೆ ಅವನು 'ಇಲ್ಲ ಹಾವನ್ನು ಹೊಡೆಯಲ್ಲ ತಪ್ಪಿಸ್ಕೊಂಡ್ ಹೋಯ್ತು' ಎಂದು ಹೇಳಿದನು. ನಂತರ ನಾವು ಹಾಗೆ ಕಾಳನ ಮನೆಯ ಬಳಿ ಹೋಗುತ್ತಿದ್ದಂತೆ ಜನರು 'ದೊಣ್ಣೆ ತೊಗೊಳ್ರೋ .... ದೊಣ್ಣೆ ತೊಗೊಳ್ರೋ .... ' ಎನ್ನುವುದನ್ನು ಕೇಳಿಸಿಕೊಂಡು ಅಲ್ಲಿಗೆ ಓಡಿ ಬಂದೆವು .



ಜನರ ಗುಂಪಿನಲ್ಲಿ ಒಬ್ಬಾತನ  ಕೈಯಲ್ಲಿದ್ದ ಮುಂದೆ ಸ್ವಲ್ಪ ಸೀಳಿದ್ದ ಕೋಲನ್ನು ತೆಗೆದುಕೊಂಡು ಆ ಹಾವಿನ ತಲೆಯ ಮೇಲೆ ಸತತವಾಗಿ ಹೊಡೆದನು. ನಾವು 'ಹೊಡಿಬೇಡಿ ಅದನ್ನು ಎಲ್ಲಾದರು ಬೇರೆ ಕಡೆ ಬಿಡಿ ಎಂದು ಕೇಳಿದೆವು ' ಆದರೆ ಅದು ಏನು ಪ್ರಯೊಜನವಾಗಲಿಲ್ಲ , ನಾವು ಹೇಳುವ ಮುನ್ನವೇ ಹಾವನ್ನು ಜನರು ಆಗಲೇ  ಕೊಂದಿದ್ದರು. ಅಲ್ಲಿದ್ದ ಕೆಲ ಹೆಂಗಸರು ' ಈ ಹಾವು ಕೋಳಿಗೆಲ್ಲಾ ಕಚ್ಚಿತ್ತು ಅದು ಬೇರೆ  ಮಕ್ಕು ಮನೆ ಮುಂದೆ ಕುತ್ಕೊಂತವೆ ' ಎಂದು ಹೇಳಿದರು. ಆ ಹಾವನ್ನು ಹಳ್ಳಿಯವರಿಂದ ರಕ್ಷಿಸಲು ಸಾಧ್ಯವಾಗದೆ ಬೇಸರದಿಂದ ನಾವು ಬೆಟ್ಟದ ಮೇಲೆ ಮಲಗಲು  ಹೋದೆವು. ಅಲ್ಲಿಗೆ ಕಾಳಪ್ಪ ಕಳ್ಳೆಕಾಯಿ ತಂದಿದ್ದ ಅದನ್ನು ಅಲ್ಲೇ ಹುರಿದು  ತಿಂದು , ಅಂದು ರಾತ್ರಿ ಅಲ್ಲೇ ಮಲಗಿದೆವು .







ಮಾರನೇಯ ದಿನ ನಾವು ಶಿವನಹಳ್ಳಿಗೆ ಬಂದೆವು . ನಾವು ಕೈಗೊಳ್ಳಬೇಕಾದ ಬೇಸಿಗೆ ಶಿಬಿರದ ಕೆಲವು ವಿಷಯಗಳ ಬಗ್ಗೆ ಚರ್ಚೆ ಮಾಡುವುದಿತ್ತು. ಶಿವನಹಳ್ಳಿಯ ಶಾಲೆಗೆ ಬರುತ್ತಿದ್ದಂತೆ ಅರುಣ್ ರವರಿಗೆ ಒಂದು ಪಕ್ಷಿಯ ಮರಿ ಕಾಣಿಸಿತು, ಇದನ್ನು ಕಂಡ ಅವರು ನಮ್ಮನ್ನು ಕರೆದರು. ಆ ಮರಿಯು ಬಹಳ ನಡುಗುತ್ತಿತ್ತು, ಪುಕ್ಕವೂ ಸಹ ಬಂದಿರಲಿಲ್ಲ. ಇದರ ಗೂಡು ಎಲ್ಲಿರಬಹುದೆಂದು ಎಲ್ಲರೂ ನೋಡತೊಡಗಿದೆವು , ಅದು ಒಂದು ದೊಡ್ಡ ಮರದ ಮೇಲೆ ಇರುವುದು ಕಾಣಿಸಿತು. ನಂತರ ಅದು ಹದ್ದಿನ ಮರಿಯೆಂದು ಗೊತ್ತಾಯಿತು ಮತ್ತು ಈ ಮರಿಯು ಅಷ್ಟುದೊಡ್ಡ ಮರದ ಮೇಲಿನ ಗೂಡಿನಿಂದ ಬಿದ್ದರೂ ಬದುಕಿರುವುದು ಆಶ್ಚರ್ಯವೆನಿಸಿತು. ಅದನ್ನು ಅದರ ಗೂಡುಗೆ ಸೇರಿಸಲು ನಮಗೆ ಅಸಾಧ್ಯವೆನಿಸಿತು . ಅದನ್ನು ತೆಗೆದುಕೊಂಡು ಒಂದು ಕಾರ್ಡ್ ಬೋರ್ಡ್ ಬಾಕ್ಸ್ ನಲ್ಲಿ ಇಟ್ಟಿಕೊಂಡೆವು . ನಂತರ ನಾವು ಅದಕ್ಕೆ ಕುಡಿಯಲು ನೀರು ಕೊಟ್ಟೆವು ಹಾಗೆಯೇ ಹಿಂದಿನ ರಾತ್ರಿ ಉಳಿದಿದ್ದ

ಕಳ್ಳೇಬೀಜವನ್ನು ಸಣ್ಣ ಸಣ್ಣ ಚೂರುಮಾಡಿ ಅದರ ಮುಂದೆ ಇಟ್ಟೆವು ಆದರೆ ಅದು ತಿನ್ನಲಿಲ್ಲ. ಅದೇನು ನಮ್ಮಂತೆಯೇ ಸಸ್ಯಹಾರಿಯೇ? ನಂತರ ಏನು ಮಾಡಲು ಗೋತ್ತಾಗದೆ ಶಂಕರಣ್ಣನವರಿಗೆ ಫೋನ್ ಮಾಡಿದೆವು . ಆಶ್ರಮದಲ್ಲಿ ಮುರಳಿರವರು ಸಿಕ್ಕರು . ಅವರಿಗೆ ಹದ್ದಿನ ಮರಿಯನ್ನು ತೋರಿಸಿದೆವು . ಅವರು ಮರದ ಬಗ್ಗೆ ಹಾಗೂ ಅದರ ಗೂಡಿನ ಬಗ್ಗೆ ವಿಚಾರಿಸಿ ಇದನ್ನು ಹಗ್ಗದ ಸಹಾಯದಿಂದ ಯಾರಾದರು ಹೆಲ್ಮೆಟ್ ಹಾಕಿಕೊಂಡು ಮರದ ಮೇಲೆ ಹತ್ತಿ ಅದರ ಗೂಡಿಗೆ ಸೇರಿಸ ಬಹುದೆಂದು ಐಡಿಯಾ ಕೊಟ್ಟರು . ನಂತರ ನಾವು ನಮ್ಮ ಬೆಳಗಿನ ತಿಂಡಿಯನ್ನು ತರಲು ಶಿವನಹಳ್ಳಿ ಊರಿಗೆ ಹೋದೆವು . ಅಲ್ಲಿ ಕೆಲವರು ನಮ್ಮಲ್ಲಿದ್ದ ಡಬ್ಬವನ್ನು ನೋಡಿ ಕುತೂಹಲದಿಂದ 'ಡಬ್ಬದಲ್ಲಿ ಏನಿದೆ? ' ಎಂದು ಕೇಳಿದರು. ನಾವು ಪಕ್ಷಿಯ ಮರಿಗೆ ಗಾಬರಿಯಾಗಬಹುದೆಂದು ತಿಳಿದು ಮರಿಯಿರುವುದನ್ನು ಯಾರಿಗೂ ಹೇಳಲಿಲ್ಲ . ಹಾಗೆ ತಿಂಡಿ ಪಾರ್ಸಲ್ ತರುತ್ತಿರುವಾಗ ಆನಂದನ ಅಪ್ಪ ಸಿಕ್ಕರು. ಅವರೂ ಸಹ ಕುತೂಹಲದಿಂದ ಡಬ್ಬದಲ್ಲಿ ಏನಿದೆ ಎಂದು ಕೇಳಿದರು ನಾವು ಅವರಿಗೆ ಹದ್ದಿನ ಮರಿಯನ್ನು ತೋರಿಸಿದೆವು. ಆನಂದನು, ನಮ್ಮ ಹಸಿವು ಮಾತ್ರ ನೀಗಿಸಿಕೊಂಡರೆ ಸಾಲದು ಎಂದು ತಿಳಿದು ಹದ್ದಿನ ಮರಿಯ ಹಸಿವೂ ನೀಗಿಸುವ ಪ್ರಯತ್ನದಲ್ಲಿ ಅವರ ಅಪ್ಪನು ಕಟ್ಟಿಸಿಕೊಂದಿದ್ದ ಕೋಳಿಮಾಂಸದಲ್ಲಿ ಸ್ವಲ್ಪ ಹದ್ದಿನ ಮರಿಗೆ ತೆಗೆದುಕೊಂಡನು .



ನಂತರ ನಾವು ಶಿವನಹಳ್ಳಿಯ ಶಾಲೆಗೆ ಬಂದೆವು . ಅಲ್ಲಿಗೆ ಶಂಕರಣ್ಣನವರೂ ಬಂದಿದ್ದರು. ನಾವು ಇಡ್ಲಿ ತಿನ್ನುವಾಗಲೇ ಹದ್ದಿನ ಮರಿಗೆ ಶಂಕರಣ್ಣ ಮಾಂಸದ ತುಂಡನ್ನು ಸಣ್ಣ ಸಣ್ಣದಾಗಿ ಮಾಡಿ ಹದ್ದಿನ ಮರಿಗೆ 'ತಿನ್ನಮ್ಮ' ಎಂದು ಬಾಯಿಯ ಹತ್ತಿರ ಇಟ್ಟರು. ಮೊದಲಿಗೆ ಅದು ತಿನ್ನಲಿಲ್ಲ, ನಂತರ ಮಾಂಸದ ತುಂಡನ್ನು ಅದಕ್ಕೆ ವಾಸನೆ ತೋರಿಸಿದರು. ಹದ್ದಿನ ಮರಿಯು ಮಾಂಸದ ತುಂಡಿನ ವಾಸನೆ ಹೀರುತ್ತಿದ್ದಂತೆ ಅದು ತುಂಡುಮಾಡಿಕೊಟ್ಟಂತೆ ಕೈನಿಂದ ಕಿತ್ತುಕೊಂಡು ತಿನ್ನಲಾರಂಬಿಸಿತು, ಇದನ್ನು ಕಂಡ ನಮಗೆ ಬಹಳ ಸಂತೋಷವಾಯಿತು. ನಾವೂ ಸಹ ಹದ್ದಿನ ಮರಿಗೆ ಮಾಂಸದ ತುಂಡನ್ನು ತಿನ್ನಿಸುವ ಆಸೆಯಾಗಿ ಖುಷಿ ಖುಷಿಯಿಂದ ತಿನ್ನಿಸಿದೆವು. ಅದು ನಮ್ಮ ಕೈಯಿಂದ ಕಿತ್ತುಕೊಂಡು ತಿನ್ನಲಾರಂಬಿಸಿತು.ಮಾಂಸದ ತುಂಡುಗಳನ್ನು ತಿಂದು ಮುಗಿಸಿದ ಹದ್ದಿನ ಮರಿಗಾಗಿ ಇನ್ನು ಹೆಚ್ಚು ಮಾಂಸನ್ನು ತರಲು ಆನಂದ ಹಾಗು ಸುನೀಲ ಶಿವನಹಳ್ಳಿಯ ಮಾಂಸದಂಗಡಿಗೆ ಹೋಗಿ ಅಲ್ಲಿ ಮಾಂಸ ಮಾರುವವನು ಬರಿ ಕಾಡಿ ಬೇಡಿ ಕೋಳಿಯ ಕಾಲುಗಳನ್ನು ಸ್ವಲ್ಪ ಮಾಂಸವನ್ನು ಗಿಟ್ಟಿಸಿಕೊಂಡು ಬಂದಿದ್ದ ಸುನೀಲ. ಇವರಿಬ್ಬರು ತಂದ ಮಾಂಸದ ತುಂಡನ್ನು ಹದ್ದಿನ ಮರಿಯು ದೊಡ್ಡ ದೊಡ್ಡ ತುಂಡುಗಳನ್ನಾಗಿ ಮಾಡಿಕೊಟ್ಟರೂ ಕೈನಿಂದ ಕಿತ್ತುಕೊಂಡು ತಿನ್ನತೊಡಗಿತು. ಮರಿಯು, ತಂದಿದ್ದ ಮಾಂಸದಲ್ಲಿ ಅರ್ಧ ತಿಂದು ಮತ್ತರ್ಧ ತಿನ್ನಲಿಲ್ಲ, ನಾವು ಅದಕ್ಕೆ ಹೊಟ್ಟೆ ತುಂಬಿದೆ ಎಂದುಕೊಂಡೆವು . ನಂತರ ಶಂಕರಣ್ಣ ಮರಿಯನ್ನು ಅದರ ಗೂಡುಗೆ ಸೇರಿಸಲು ಕೆಲವರನ್ನು ಕೇಳಿ ಹಗ್ಗವನ್ನು ತಂದರು. ಸುನೀಲನು ಮರ ಹತ್ತಿ ಮರಿಯನ್ನು ಗೂಡಿಗೆ ಸೇರಿಸುವ ಧೈರ್ಯ ಮಾಡಿದನು ಅವನಿಗೆ ಮರಿಯನ್ನು ಅದರ ಗೂಡಿಗೆ ಸೇರಿಸಲು ಮರ ಹತ್ತುವುದು ಬಹಳ ಸ್ಪೂರ್ಥಿ ತಂದಿತ್ತು. ನಾವು ತಂದ ಕಾರ್ಡ್ ಬೋರ್ಡ್ ಬಾಕ್ಸ್ ನಲ್ಲಿ ಮರಿ ಮತ್ತು ಉಳಿದ ಮಾಂಸವನ್ನು ಇಟ್ಟು ಬಾಕ್ಸನ್ನು ಒಂದು ಪ್ಲಾಸ್ಟಿಕ್ ಚೀಲದಲ್ಲಿ ಇಟ್ಟು , ಚೀಲವನ್ನು ಹಗ್ಗಕ್ಕೆ ಕಟ್ಟಿ ದೆವು ಅದನ್ನು ಸುನೀಲ ಮೇಲಕ್ಕೆಳೆಯುತ್ತಿದ್ದಂತೆ ಎಲ್ಲರೂ 'ಬೋಲೊ ಭಾರತ್ ಮಾತಾಕಿ ಜೈ' ಎಂದೆವು. ಸುನೀಲನು ಮರಿಯನ್ನು ಸುರಕ್ಷಿತವಾಗಿ ಗೂಡಿಗೆ ಸೇರಿಸಿ ಮರದಿಂದ ಕೆಳಗಿಳಿದ. ನಮಗೆಲ್ಲರಿಗೂ ಮರಿಯನ್ನು ಮತ್ತೆ ಅದರ ಗೂಡಿಗೆ ಸೇರಿಸಿದ ತೃಪ್ತಿಯಾಯಿತು . ನಂತರ ಶಂಕರಣ್ಣ ' ಮರಿಯನ್ನು ನೋಡಲು ಹದ್ದು ಬಂದರೂ ಸರಿ , ಅಥವಾ ಕಾಗೆಗಳು ಮರಿಯನ್ನು ತಿಂದರೂ ಸರಿ ಒಟ್ಟಿನಲ್ಲಿ ಮರಿಯನ್ನು ಗೂಡಿಗೆ ಸೇರಿಸಿದ್ವಿ '

ಎಂದರು. ನಂತರ ನಾವೆಲ್ಲರೂ ಅಲ್ಲಿಂದ ಹೊರಟೆವು . ತುಂಬಾ ಸಂತೋಷಕರವಾದ ವಿಷಯವೇನೆಂದರೆ ಶಂಕರಣ್ಣನವರು ಅಂದು ಸಂಜೆ ಹದ್ದು ತನ್ನ ಮರಿಯಿರುವ ಗೂಡಿಗೆ ಬಂದಿರುವುದನ್ನು ನೋಡಿ ನಮ್ಮೆ ಲ್ಲರಿಗೂ ಹೇಳಿದರು. ಈ ವಿಷಯ ಕೇಳಿದ ನಮಗೆ ಎಲ್ಲಿಲ್ಲದ ಸಂತೋಷವಾಯಿತು.

ಈ ಒಂದು ಸಂಗತಿ ಬರೆಯಲು ಕಾರಣವೇನೆಂದರೆ, ಮನುಷ್ಯನು ಪ್ರಕೃತಿಗೆ ಹಲವಾರು ರೀತಿಯಲ್ಲಿ ಹಾನಿಮಾಡುತ್ತಾ ಬಂದಿದ್ದಾನೆ ಈಗಲೂ ಅದನ್ನೆ ಮುಂದುವರೆಸುತ್ತಿದ್ದಾನೆ. ನಮ್ಮಿಂದ ಪ್ರಕೃತಿಗೆ ಯಾವ ಸಹಾಯವಾಗಲಿ , ಲಾಭವಾಗಲಿ ಇಲ್ಲ . ಹದ್ದಿನ ಮರಿಯನ್ನು ಅದರ ಗೂಡಿಗೆ ಸೇರಿಸಲು ನಾವು ನಡೆಸಿದ ಪ್ರಯತ್ನ ಪ್ರಕೃತಿಯು ಅವಳ ಭವ್ಯತೆಯನ್ನು ಇಣುಕಿ ನೋಡಲು ಕಲ್ಪಿಸಿಕೊಟ್ಟ ಒಂದು ಸದವಕಾಶವೇ ಸರಿ. ಈ ಅವಕಾಶ ನಮ್ಮೆಲ್ಲರಿಗೂ ಖುಷಿ ತಂದಿತ್ತು .






ಕೆಲವು ಪ್ರಶ್ನೆಗಳು:

೧) ಮುರುಳಿಯಣ್ಣ ತಲೆಗೆ ಹೆಲ್ಮೆಟ್ ಧರಿಸಿ ಎಂದು ಹೇಳಲು ಕಾರಣವೇನು?

೨) ನಾವು ಹದ್ದಿನ ಮರಿಗೆ ಕಳ್ಳೇಬೀಜವನ್ನು ಚೂರು ಮಾಡಿ ಹಾಕಿದಾಗ ಅದು ತಿನ್ನಲಿಲ್ಲವೇಕೆ?

೩) ಜನರು ಹಾವನ್ನು ಸಾಯಿಸಲು ಹೋದಾಗ ಅದನ್ನು ರಕ್ಷಿಸಲು ನೀವೇನು ಮಾಡುತ್ತಿದ್ದಿರಿ?

೪)ಇಂತಹ ಸನ್ನಿವೆಷ ನಿಮಗೆ ಬಂದೊದಗಿದ್ದರೆ ನೀವೇನು ಮಾಡುತ್ತಿದ್ದಿರಿ?

- GRAMS

***Published by***

**WILDLIFE CONSERVATION GROUP**

***Content***

**GIRISH**

**RAVI**

**AROON**

**MANU**

**SUNIL**

***Contact***

***kaanana.mag@gmail.com***